ಕಮಲಾಪುರ ಕ್ಷೇತ್ರದ ಕೆರೆಗಳ ದುರಸ್ಥಿ

173 (386) ಶ್ರೀ ರೇವು ನಾಯಕ್ ಬೆಳಮುಗಿ(ಕಮಲಪುರ) : ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಗುಲ್ಬರ್ಗಾ ಜಿಲ್ಲೆಯ ಕಮಲಾಪುರ ವಿಧಾನ ಸಭಾ ಕ್ಷೇತ್ರದಲ್ಲಿರುವ ಸಣ್ಣ ನೀರಾವರಿ ಇಲಾಖೆಯ ಕೆರೆಗಳೆಷ್ಟು : ಇವುಗಳಲ್ಲಿ ದುರಸ್ತಿಯಾಗಬೇಕಾಗಿರುವ ಕೆರೆಗಳೆಷ್ಟು (ತಾಲ್ಲೂಕುವಾರು ಮಾಹಿತಿ ನೀಡುವುದು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಆ. ಸಾಲೆಗಾಂವ್ ಗ್ರಾಮದಲ್ಲಿರುವ ಕೆರೆಯು ಒಡೆದು ಹೋಗುವ ಹಂತದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಇ. ಬಂದಿದ್ದಲ್ಲಿ. ಸದರಿ ಕೆರೆಯ ದುರಸ್ಥಿಗಾಗಿ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಮಲ್ಲಿಕಾರ್ಜುನಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ. 15 (ಹದಿನೈದು) ದುರಸ್ತಿಯಾಗಬೇಕಾಗಿರುವ ಕೆರೆಗಳ ಸಂಖ್ಯೆ:15 ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ. ಬಂದಿದೆ.

ಇ. ಈ ಕೆರೆಯ ದುರಸ್ತಿಗಾಗಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ತಜ್ಞರಿಂದ ಸಮಗ್ರ ಪರಿವೀಕ್ಷಣೆಗೆ ಒಳಪಡಿಸಿದ್ದು. ಅವರ ನಿರ್ದೇಶನದಂತೆ ದುರಸ್ತಿಗಾಗಿ 190.00 ಲಕ್ಷರೂಗಳ ಅಂದಾಜು ಪಟ್ಟಿಯನ್ನು ತಯಾರಿಸಿ. ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿಯ ಅನುಮೋದನೆ ಪಡೆಯಲಾಗಿದೆ. ಅಂದಾಜು ಪಟ್ಟಿಗೆ ಅನುದಾನದ ಲಭ್ಯತೆಯ ಮೇಲೆ ಆಡಳಿತಾತ್ಮಕ ಅನುಮೋದನೆ ನೀಡಿದ ನಂತರ ಕಾಮಗಾರಿ ಕೈಗೊಳ್ಳಲು ಕ್ರಮ ತೆಗೆದುಕೊಳ್ಳಲಾಗುವುದು.

ಅನುಬಂಧ

ಕ್ರಮ ಸಂಖ್ಯೆ	ತಾಲ್ಲೂಕು	ಕಾಮಗಾರಿಯ ಹೆಸರು	ಅಚ್ಚುಕಟ್ಟು ಹೆಕ್ಟೇರ್ ಗಳಲ್ಲಿ	2002-03ನೇ ಸಾಲಿನಲ್ಲಿ ಪರಿಹಾರ ಉದ್ಯೋಗ ಸೃಜನ ಶೀರ್ಷಿಕೆ ಅಡಿಯಲ್ಲಿ ಅವಶ್ಯಕ ದುರಸ್ತಿ ಮಂಜೂರಾದ ಅಂದಾಜು ಮೊತ್ತ ಲಕ್ಷ ರೂಗಳಲ್ಲಿ
1	2	3	4	5
1)	ಗುಲ್ಬರ್ಗಾ	ನವನಿಹಾಳ ಕೆರೆ	337.00	3.00
2)	,,	ದಿನಸಿ ಕೆರೆ	210.00	2.00
3)	,,	ಬಾಚಿನಾಳ ಕೆರೆ	134.00	2.00
4)	,,	ಓಕಳಿ ಕೆರೆ (ಹಳೆ)	97.60	2.00
5)	,,	ಹೋಳಕುಂದಾ ಕೆರೆ	44.80	5.00
6)	,,	ಕಮಲಾಪೂರ (ಉ) ಕೆರೆ	148.00	1.00

7)	ಗುಲ್ಬರ್ಗಾ	ಕಮಲಾಪೂರ (ದ) ಕೆರೆ	74.00	2.00
8)	,,	ಭೀಮನಾಳ ಕೆರೆ	101.20	2.00
9)	,,	ನೀಲೀಕೂಡ ಕೆರೆ	96.71	25.35 (ರೈತ ಕಾಯಕ ಕೆರೆ ಅಡಿಯಲ್ಲಿ)
10)	,,	ಮಳಸಾಪೂರ ಕೆರೆ	270.00	4.00
11)	,,	ಭೂಯ್ಯಾರ ಕೆರೆ	600.00	4.00
12)	,,	ಕಲಮೂಡ ಕೆರೆ	200.00	3.00
13)	ಅಳಂದ	ಮಟಕಿ ಕೆರೆ	196.00	5.00
14)	,,	ಸಾಲೇಗಾಂವ ಕೆರೆ	450.00	5.00
15)	,,	ನರೋಣ ಕೆರೆ	448.00	2.00
		ಒಟ್ಟು :	**3407.31**	**67.35**

1.4.2002 ರಿಂದ 31.1.2003 ರವರೆಗೆ ರಾಜ್ಯದ ಐ.ಎ.ಎಸ್.ಅಧಿಕಾರಿಗಳು ಕೈಗೊಂಡ ವಿದೇಶ ಪ್ರವಾಸ ವೆಚ್ಚ

174(320) ಶ್ರೀ ಯು.ಆರ್. ಸಭಾಪತಿ(ಉಡುಪಿ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. 1-4-2002 ರಿಂದ 31-1-2003ರವರಗೆ ವಿದೇಶ ಪ್ರವಾಸ ಕೈಗೊಂಡ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಐಎಎಸ್, ಐಪಿಎಸ್ ಮತ್ತು ಐಎಫ್.ಎಸ್ ಅಧಿಕಾರಿಗಳು ಯಾರು? (ಇವರುಗಳು ಪ್ರಯಾಣದ ಸ್ಥಳ, ಉದ್ದೇಶ. ಒಟ್ಟು ವೆಚ್ಚ ಹಾಗೂ ವೆಚ್ಚ ಭರಿಸಿದರೆ ವಿವರಗಳನ್ನು ಒದಗಿಸುವುದು)

ಶ್ರೀ. ಎಸ್.ಎಂ. ಕೃಷ್ಣ ಮುಖ್ಯ ಮಂತ್ರಿಗಳು

ಅ. ಲಭ್ಯವಿರುವ ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ANNEXURE

SL.NO	NAME AND ADDRESS SRIYUTHS/SMT.	CADRE	PLACE, AND DUR TION OF VISIT	EXPENDIT METBY
1	2	3	4	5
1	ADHIP CHAUDHURI PRINCIPAL SECRET ARY TO GOVERNMENT CO OPERATION DEPT BANGALORE	IAS	TO ATTEND THE 6TH ASIA PACIFIC CO-OPERATIVE MINISTERS CONFERENCE AT KATHMA	GOVERN MENT OF KARNAT AKARS. 45.0